ಪ್ರವಾಸೋದ್ಯಮ ಇಲಾಖೆಗೆ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಇದ್ದೀರಿ. ಇದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಯಾವ ಪ್ರದೇಶವನ್ನು ಅವರಿಗೆ ಕೊಟ್ಟಿದ್ದಾರೋ ಅದನ್ನು ಬಿಡಿಸಿ ಎಂದು ಕೇಳುವುದಿಲ್ಲ, ಅದನ್ನು ಪಡೆದವರಿಗೆ ಕೊಡಬೇಕು. ಆದರೆ ಯಾವ ಪ್ರದೇಶ ಈ ಸರ್ವೆ ನಂಬರಿನಲ್ಲಿ ಸೇರಿಲ್ಲವೋ ಅದನ್ನು ಪ್ರವಾಸೋದ್ಯಮ ಇಲಾಖೆಗೆ ಕೊಡಿ ಒಂದು ವೇಳೆ ಅದರಲ್ಲೂ ಕೂಡ ಗುಡಿಸಲು ಹಾಕಿಕೊಂಡಿದ್ದರೆ ಅವನ್ನು ಬಿಡಿಸಿ, ಓಡಿಸಿ ಎಂದು ಹೇಳುವುದಿಲ್ಲ, ಅವರಿಗೆ ಬೇರೆ ಜಾಗ ಕೊಟ್ಟು ಸರಿಮಾಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಪರಿಶೀಲನೆ ಮಾಡುತ್ತೇನೆ.

ದೇವದಾಸಿಯರ ಪುನರ್ ವಸತಿ

೯೯೭. ಶ್ರೀ ಜಮಖಂಡಿ (ಮುಧೋಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಾಪುರ ಜಿಲ್ಲೆಯಲ್ಲಿರುವ ದೇವದಾಸಿಯರ ಸಂಖ್ಯೆ ಎಷ್ಟು ?

ಆ) ದೇವದಾಸಿಯರ ಪುನರ್ವಸತಿಯ ಸಲುವಾಗಿ ಯೋಜನೆಯನ್ನೇನಾದರು ಸಿದ್ಧಪಡಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದಂ ?

ಶ್ರೀ ಜಿ ಬಸಪಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ದೇವದಾಸಿಯರ ಸಂಖ್ಯೆ ೧೨೧೩.

ಆ) ಹೌದು.

ಇ) ಈಗಾಗಲೇ ಪ್ರಾರಂಭಿಸಲಾಗಿದ್ದ ದೇವದಾಸಿಯರು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ಶ್ರೀ ಬಿ.ಜಿ. ಜಮಖಂಡಿ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಿಜಾಪುರ ಜಿಲ್ಲೆಯಲ್ಲಿ ದೇವದಾಸಿಯರ ಸಂಖ್ಯೆ ೧೨೧೩ ಎಂದು ಹೇಳಿದ್ದಾರೆ. ಈ ಸಂಖ್ಯೆಯನ್ನು ಯಾವ ಆಧಾರದ ಮೇಲೆ ಗುರುತಿಸಿದ್ದಾರೆ ? ದೇವದಾಸಿಯರ ಪುನರ್‌ವಸತಿ ಸಲುವಾಗಿ ಯೋಜನೆಯನ್ನು ಏನಾದರೂ ಕೈಗೊಂಡಿದ್ದಾರೆಯೇ ? ನಮಗೆ ತಿಳಿದಿರುವಂತೆ ಜಮಖಂಡಿ ಮತ್ತು ಮುಧೋಳ ತಾಲ್ಲೂಕಿನಲ್ಲಿಯೇ ೨–೩ ಸಾವಿರ ದೇವದಾಸಿಯರು ಇದ್ದಾರೆ. ಸುಮಾರು ೫೧ ಜನ ದೇವದಾಸಿಯರಿಗೆ ಅಂತರಜಾತಿ ವಿವಾಹವನ್ನು ಮಾಡಲಾಗಿದೆ. ಪ್ರಪಂಚದಲ್ಲಿ ಆಗದೇ ಇರುವಂಥ ಒಂದು ಮಹಾಕ್ರಾಂತಿಯನ್ನು ಅಲ್ಲಿ ಮಾಡಲಾಗಿದೆ ಇವರ ಅಭಿವೃದ್ಧಿಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಬಿಜಾಪುರ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿ ಹಾಕಿಕೊಂಡಿದ್ದೀರಿ ?

ಶ್ರೀ ಜಿ. ಬಸಪಣ್ಣ.—ಮಾನ್ಯ ಅಧ್ಯಕ್ಷರೇ ಮೂರುವರ್ಷಕ್ಕೊಮ್ಮೆ ಈ ಬಗ್ಗೆ ಸರ್ವೆ ಮಾಡಲಾಗುತ್ತದೆ. ೮೪ರಲ್ಲಿ ಮಾಡಿದ ಸರ್ವೆ ಪ್ರಕಾರ ೧೨೧೩ ಜನ ದೇವದಾಸಿಯರು ಬಿಜಾಪುರ ಜಿಲ್ಲೆಯಲ್ಲಿದ್ದಾರೆ. ಇಡೀ ರಾಜ್ಯದಲ್ಲಿ ೮೮೭೦ ಮಂದಿ ಇದ್ದಾರೆ. ಬಾದಾಮಿ ತಾಲ್ಲೂಕಿನಲ್ಲಿ ೪೦೦ ಜಮಖಂಡಿಯಲ್ಲಿ ೭೧೦ ಮುಧೋಳ್‌ನಲ್ಲಿ ೫೧ ಹೀಗೆ ಒಟ್ಟು ೧೨೧೩ ದೇವದಾಸಿಯರು ಇದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ ಇವರ ಸಂಖ್ಯೆ ಜಾಸ್ತಿಯಿರುವುದರಿಂದ, ಅಲ್ಲಿ ಸರ್ಟಿಫೈಡ್ ಸ್ಕೂಲುಗಳನ್ನು ಇವರ ಮಕ್ಕಳಿಗೋಸ್ಕರ ತೆರೆಯಲಾಗಿದೆ. ೫ ರಿಂದ ೧೮ ವಯಸ್ಸಿನ ಸುಮಾರು ೫೦ ಮಕ್ಕಳು ಈ ಶಾಲೆಯಲ್ಲಿ ಓದುತ್ತಿದ್ದಾರೆ. ಅಥಣಿಯಲ್ಲಿ ಸ್ಪೇಟ್ ಹೋಂ ಮಾಡಿದ್ದೇವೆ ಅಲ್ಲಿ ೧೫ ರಿಂದ ೪೦ ವರ್ಷದ ಹೆಣ್ಣು ಮಕ್ಕಳು ಇರುವುದಕ್ಕೆ ಅವಕಾಶ ಇದೆ. ದೇವದಾಸಿಯರ ಅಭಿವೃದ್ಧಿ ಗೋಸ್ಕರ ಮುನೋಳಿ, ಕಟಕೋಳ, ಯರವಾಡ ಗ್ರಾಮಗಳಲ್ಲಿ ಹೊಲಿಗೆ ಕೇಂದ್ರ, ಮೇಣದ ಬತ್ತಿ ತಯಾರಿಸುವುದು, ಅಗರಬತ್ತಿ ಹಾಗೂ ಸಾಬೂನು ತಯಾರು ಮಾಡತಕ್ಕ ಕೇಂದ್ರಗಳನ್ನು ತೆರೆದಿದ್ದೇವೆ. ದೇವದಾಸಿ ಪದ್ಧತಿಯನ್ನು ನಿಷೇದ ಮಾಡತಕ್ಕ ಕಾನೂನು ೧೯೮೨ರಲ್ಲಿ ಜಾರಿಗೆ ಬಂದಿದೆ. ಆದರ ಪ್ರಕಾರ ದೇವದಾಸಿ ಪದ್ಧತಿಯನ್ನು

ಅನುಸರಿಸುವುದು ಕಾನೂನು ಬಾಹಿರ. ಇದನ್ನು ಆಚರಣೆ ಮಾಡುವವರಿಗೆ ೩ ವರ್ಷ ಜೈಲುವಾಸ, ಎರಡು ಸಾವಿರ ರೂಪಾಯಿ ಜುಲ್ಮಾನೆ ಹಾಕಲಾಗುವುದು. ದೇವದಾಸಿಯರ ತಂದೆತಾಯಿಗಳು ಇದಕ್ಕೆ ಎನ್‌ಕರೇಜ್ ಮಾಡಿದರೆ, ಅವರ ಸಂಬಂಧಿಕರು ಎನ್‌ಕರೇಜ್ ಮಾಡಿದರೆ ಅಂಥವರಿಗೆ ೫ ವರ್ಷ ಜೈಲು ವಾಸ, ೫ ಸಾವಿರ ರೂಪಾಯಿ ಜುಲ್ಮಾನೆ ಇಂಥಹ ಕಠಿಣ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ಅನಿಷ್ಟ ಪದ್ಧತಿಯನ್ನು ತೊಲಗಿಸಬೇಕೆಂದು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಜಿ. ಜವಳಿ.—ದೇವದಾಸಿಯರನ್ನು ಯಾವ ಆಧಾರದ ಮೇಲೆ ಸೆನ್ಸಸ್ ಮಾಡಿದ್ದಿರಿ. ೧೯೮೪ರಲ್ಲಿ ಪ್ರಪಂಚದಲ್ಲಿ ಆಗದೇ ಇದ್ದಂಥ ಕೆಲಸವನ್ನು ಮಾಡಿದ್ದೇವೆ. ೫೧ ಜನ ದೇವದಾಸಿಯರಿಗೆ ಅಂತರ್‌ಜಾತಿ ವಿವಾಹ ಮಾಡಿಸಿದ ನಂತರ ಇವತ್ತು ಅವರು ಒಳ್ಳೆಯ ಬಾಳುವೆ ಮಾಡುತ್ತಿದ್ದಾರೆ. ಮೂರು ವರ್ಷಕ್ಕೊಮ್ಮೆ ಸೆನ್ಸಸ್ ಮಾಡುತ್ತೇವೆಂದು ಹೇಳಿದ್ದೀರಿ. ಈ ನಡುವಿನ ಅಂತರದಲ್ಲಿ ಎಷ್ಟು ಜನ ದೇವದಾಸಿಯರಿಗೆ ಪುನರ್ ವಸತಿ ಕಲ್ಪಿಸಲಾಗಿದೆ ? ನನ್ನ ತಾಲ್ಲೂಕಿನಲ್ಲಿ ೫೧ ಜನ ಎಂದು ಹೇಳಿದ್ದೀರಿ. ಸರಿಯಾದ ಮಾಹಿತಿಯಿಲ್ಲ. ಆದ್ದರಿಂದ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ —ದೇವದಾಸಿ ಕುಟುಂಬಗಳನ್ನು ಐಡೆಂಟಿಫೈ ಮಾಡಲಿಕ್ಕೆ ವಿ ಹ್ಯಾವ್ ಗೀವನ್ ಸರ್ಟನ್ ಕ್ರೈಟೀರಿಯಂ; ಆದರ ಆಧಾರದ ಮೇಲೆ ನಮ್ಮ ಇಲಾಖೆಯವರು ಐಡೆಂಟಿಫೈ ಮಾಡುತ್ತಾರೆ. ೧೯೮೪ನೇ ಇಸವಿಯಲ್ಲಿ ಇವರನ್ನು ಗುರುತಿಸಿದ್ದಾರೆ, ಇವರ ಬಗ್ಗೆ ಮೂರು ವರ್ಷಗಳಿಗೊಮ್ಮೆ ಸರ್ವೆ ಮಾಡುತ್ತೇವೆ. ೧೯೮೮ನೇ ಇಸವಿಯಲ್ಲಿ ಸಧ್ಯದಲ್ಲಿಯೇ ಈ ಸರ್ವೆ ಮಾಡುತ್ತೇವೆ. ಈ ಮಧ್ಯೆ ಎಷ್ಟು ಜಾಸ್ತಿಯಾಗಿದೆ ಎನ್ನುವ ಅಂಕಿ ಸಂಖ್ಯೆಗಳನ್ನು ಕೇಳಿದ್ದಾರೆ, ಅದನ್ನು ಸಧ್ಯಕ್ಕೆ ಕೊಡಲಿಕ್ಕೆ ಆಗುವುದಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ೧,೨೧೩ ದೇವದಾಸಿಯರು ಏನಿದ್ದಾರೆ ಅವರ ಪುನರ್ ವಸತಿ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಬಿಜಾಪುರದಲ್ಲಿ ಏನೇನು ಪುನರ್ವಸತಿ ಕಲ್ಪಿಸಿದ್ದೇವೆ, ಎನ್ನುವಂತಾದ್ದರ ಬಗ್ಗೆ ವಿವರಗಳನ್ನು ನಾನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ. ದೇವದಾಸಿತನ ನಿರ್ಮೂಲನೆ ಮಾಡಲಿಕ್ಕೆ ಅವರನ್ನು ಮದುವೆ ಮಾಡಿಕೊಂಡಂತಹವರಿಗೆ ಇನ್‌ಸೆಂಟಿವ್ ಕೊಡತಕ್ಕ ಕಾರ್ಯಕ್ರಮ ಇದೆ, ಅವರನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ ಅವರಿಗೆ ಮೂರು ಸಾವಿರ ರೂಪಾಯಿ ಕೊಡುತ್ತೇವೆ. ಈ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ೨೦೬ ಜನರಿಗೆ ಮದುವೆ ಮಾಡಿದ್ದೇವೆ.

ಶ್ರೀ ವೇದಾಂತ ಹೆಮ್ಮಿಗೆ.—ದೇವದಾಸಿಯರು ಎಂದು ಕರೆದಿದ್ದು ಯಾವಾಗ? ಯಾರು ಕರೆದರು? ಏತಕ್ಕಾಗಿ ಕರೆದರು ? ಇನ್ನು ಎರಡನೆಯದು ಅಂದರೆ, ಯಾವುದೋ ಒಂದು ಅನುಚಾನ ಪದ್ಧತಿ ಮೇಲೆ ದೇವದಾಸಿ ಎಂದು ಕರೆಯುತ್ತಾರೆ, ಇದೇ ಪದ್ಧತಿಯಲ್ಲಿ ಇದ್ದು ಅವರನ್ನು ಗುರುತಿಸದೇ ಇರತಕ್ಕ ದೇವದಾಸಿಯರು ಎಷ್ಟು ಮಂದಿ ಇದ್ದಾರೆಂದು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ —ದೇವದಾಸಿತನದ ಪದ್ಧತಿ ಬಹಳ ದಶಕದಿಂದ ನಡೆದುಕೊಂಡು ಬಂದ ಪದ್ಧತಿ. ಇವರನ್ನು ದೇವರಿಗೆ ಬಿಡತಕ್ಕದ್ದಾ ಮೂಹೂರ್ತವಂಬಿಕೆ. ಬೆಳಗಾಂ, ಬಿಜಾಪುರ ಆ ಭಾಗದಲ್ಲಿ ಇದು ಜಾಸ್ತಿ ಇದೆ. ಇದು ಈಗ ಕಮೀಣ ಕಡಿಮೆಯಾಗುತ್ತಾ ಬಂದಿದೆ. ನಮ್ಮ ಇಲಾಖೆಯ ಮುಖಾಂತರ ಪರಿಣಾಮ ಕಾರಿಯಾದ ಕಾರ್ಯಕ್ರಮ ತೆಗೆದುಕೊಂಡಿರುವುದರಿಂದಲೂ ಹಾಗೂ ಈ ಬಗ್ಗೆ ನಮ್ಮ ಇಲಾಖೆ ಮೂಲಕ ತಿಳುವಳಿಕೆ ಕೊಡುತ್ತಿರುವುದರಿಂದ ಕಡಿಮೆಯಾಗುತ್ತಾ ಬಂದಿದೆ. ಇನ್ನು ಮಾನ್ಯ ಸದಸ್ಯರು ದೇವದಾಸಿ ಎಂದು ಯಾರು ಕರೆದರು ಎಂದು ಕೇಳಿದ್ದಾರೆ, ಇದಕ್ಕೆ ದೊಡ್ಡ ಇತಿಹಾಸ ಇದೆ, ಇದು ಮೊದಲಿದಿಂದಲೂ ನಡೆದುಕೊಂಡು ಬಂದಿರತಕ್ಕ ಪದ್ಧತಿ.

ಶ್ರೀ ಬಿ.ಆರ್. ನಿಲಕಂಠಪ್ಪ.—ಇಪ್ಪತ್ತು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿಧವಾ ವೇತನ ಯೋಜನೆಯ ಮೂಲಕ ಹಣ ಕೊಡುವಂತೆ. ಈ ದೇವದಾಸಿಯರಿಗೂ ಸಹ ಪ್ರತಿ ತಿಂಗಳು ಅವರ ಜೀವನ ನಡೆಸಿಕೊಳ್ಳುವುದಕ್ಕೆ ಸ್ವಲ್ಪ ಹಣ ಕೊಡುವಂಥ ವ್ಯವಸ್ಥೆ ಮಾಡಿದರೆ ಈ ವೃತ್ತಿ ಸ್ವಲ್ಪ ನಿಲ್ಲಿಸಿಹೋದು ಎಂದು ನನ್ನ ಅನಿಸಿಕೆ. ಮಹಾರಾಷ್ಟ್ರದಲ್ಲಿ ಹಾಗೂ ಇನ್ನೂ ಅನೇಕ ಕಡೆಗಳಲ್ಲಿ ವೇಶ್ಯಾ ವೃತ್ತಿಗೆ ಲೈಸೆನ್ಸ್ ಕೊಟ್ಟು ಅವರ ವೃತ್ತಿ ಮಾಡಿಕೊಳ್ಳಲಿಕ್ಕೆ ಅನುಕೂಲ ಮಾಡಿಕೊಡುತ್ತಾರೆ, ಅದೇ ರೀತಿ ಇಲ್ಲಿ ಬೇರೆ ವ್ಯವಸ್ಥೆ ಏತಕ್ಕೆ ಮಾಡಬಾರದು. ಇಪ್ಪತ್ತಿನ ದಿವಸ ಅವರ ಜೀವನಕ್ಕೋಸ್ಕರ

ವೇಶ್ಯಾವೃತ್ತಿಗೆ ಕೆಲವರು ಇಳಿಯುವಂತಾಗುತ್ತಿದೆ. ಆದ್ದರಿಂದ ಪ್ರತಿ ತಿಂಗಳು ಅವರಿಗೆ ವಿಧವಾ ವೇತನ ಮಾದರಿ ಸ್ವಲ್ಪ ಹಣ ಕೊಡುವಂಥ ವ್ಯವಸ್ಥೆಯನ್ನು ಮಾಡಿದರೆ ಈ ಒಂದು ಪದ್ಧತಿ ಕಡಿಮೆ ಯಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು ?

ಶ್ರೀ ಜಿ. ಬಸವಣ್ಣಪ್ಪ.—ಈ ವಿಷಯದಲ್ಲಿ ನಮ್ಮ ಇಲಾಖೆ ಕೆಲವು ಒಳ್ಳೆಯ ಕಾರ್ಯಕ್ರಮ ಗಳನ್ನು ಹಾಕಿಕೊಂಡಿದೆ. ೫೫ ವರ್ಷದೊಳಗಿರುವ ದೇವದಾಸಿಯರ ಹೆಣ್ಣು ಮಕ್ಕಳ ಪ್ರಾಮಾಣಿಕ ಶಾಲೆ ಎಂದು ಬೆಳಗಾಂ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಈ ಪದ್ಧತಿ ಬಿಜಾಪುರ ಹಾಗೂ ಧಾರವಾಡಗಳ ಕಡೆಯಲ್ಲಿ ಜಾಸ್ತಿ ಇದೆ. ಇವೊತ್ತು ದೇವದಾಸಿಯರ ಹೆಣ್ಣು ಮಕ್ಕಳಿಗೋಸ್ಕರ ಪ್ರಾಮಾಣಿಕ ಶಾಲೆಗಳನ್ನು ತೆರೆದಿದ್ದೇವೆ. ೧೮ ವರ್ಷದಿಂದ ೩೫ ವರ್ಷದೊಳಗಿನ ಹೆಣ್ಣು ಮಕ್ಕಳಿಗೆಂದು ಸ್ಪೆಷಲ್ ಹೋಮ್ ತೆರೆದಿದ್ದು, ಅಲ್ಲಿ ಅವರಿಗೆ ವೃತ್ತಿಪರ ತರಬೇತಿ ಕೊಡುತ್ತಿದ್ದೇವೆ, ಪುನರ್ ವಸತಿ ಕಲ್ಪಿಸಿಕೊಡುತ್ತಿದ್ದೇವೆ ಅವರನ್ನು ಮದುವೆಯಾದವರಿಗೆ ೩ ಸಾವಿರ ರೂಪಾಯಿ ಕೊಡುತ್ತಿದ್ದೇವೆ. ಆದ್ದರಿಂದ, ಅವರಿಗೆ ಪೂರಾಶನ ಕೊಡತಕ್ಕದ್ದು ಸರಿಯಲ್ಲ.

ಶ್ರೀ ಜ್ಞಾನದೇವ ಎನ್ ದೊಡ್ಡಮೇಟಿ.—ದೇವದಾಸಿಯರನ್ನು ಯಾವ ಆಧಾರದ ಮೇಲೆ ಗುರುತು ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಯಾರು ದೇವದಾಸಿಯರು ಎಂದು ಗುರುತು ಮಾಡುವುದು ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಪುನರ್ ವಸತಿ ಯೋಜನೆ ಮಾಡಿದ್ದೇವೆಂದು ಹೇಳಿದ್ದೀರಿ. ಇದು ಸಾಮಾಜಿಕ ಪ್ರಶ್ನೆ. ತಾವು ಪುನರ್‌ವಸತಿ ಮಾಡುವುದಕ್ಕೆ ಮುಂಚೆ ಈ ಸಾಮಾಜಿಕ ಪ್ರಶ್ನೆಯನ್ನು ಬಗೆಹರಿಸಬೇಕಾಗಿದೆ. ನನಗೆ ತಿಳಿದ ಮಟ್ಟಿಗೆ ಅನೇಕ ಜನ ಭೂಮಾಲೀಕರು, ಪಟ್ಟಭದ್ರ ಹಿತಾಸಕ್ತಿಗಳು ಈ ದಿವಸ ಎಲ್ಲರೂ ಇದಕ್ಕೆ ವಿರೋಧ ಇದ್ದಾರೆಂದು ತಿಳಿದುಬಂದಿದೆ ಅವರು ಈ ತರಹದ ಸಿಸ್ಟಮ್ ಮುಂದುವರಿಸಿಕೊಂಡು ಹೋಗಬೇಕು. ಇದು ಅನೂಚಾನವಾಗಿ ಬಂದಂಥ ಪದ್ಧತಿ ಇದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ, ಈ ಒಂದು ಪದ್ಧತಿ ಯಾವ ಯಾವ ಭಾಗಗಳಲ್ಲಿದೆ, ಆ ಭಾಗದಲ್ಲಿ ಇಂತಹವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

೯–೩೦ ಪಿ.ಎಂ

ಎರಡನೆಯದಾಗಿ, ಪುಸ್ತಕ ಉಡುಪು, ಮುಂತಾದುವನ್ನು ಬೇರೆಯವರಿಗೆ ಕೊಡುವಂತೆ ಇವರಿಗೂ ಕೊಡತಕ್ಕ ಕಾರ್ಯಕ್ರಮವೇನಾದರೂ ಹಾಕಿಕೊಂಡಿದ್ದೀರಾ?

ಶ್ರೀ ಜಿ. ಬಸವಣ್ಣಪ್ಪ.—೧೯೮೨ರಲ್ಲಿ ಇದ್ದಂಥ ದೇವದಾಸಿ ಕಾನೂನಿಗೆ ೧೯೮೪ರಲ್ಲಿ ಎಫ್ಫೆಕ್ಟಿವ್ ಆಗಿ ನಾವು ತಿದ್ದುಪಡಿಯನ್ನು ತಂದಿದ್ದೇವೆ. ಈ ದೇವದಾಸಿ ಪದ್ಧತಿ ಕಾನೂನುಬಾಹಿರ ಮತ್ತು ಶಿಕ್ಷಾರ್ಹ. ದೊಡ್ಡವರೇ ಆಗಲಿ, ಚಿಕ್ಕವರೇ ಆಗಲಿ, ಅಥವಾ ದೊಡ್ಡ ಶ್ರೀಮಂತರೇ, ಆಗಲಿ ಈ ದೇವದಾಸಿ ಪದ್ಧತಿಗೆ ಪ್ರಚೋದನೆಯನ್ನು ಯಾರು ಮಾಡುತ್ತಾರೋ ಅವರಿಗೆ ೩ ವರ್ಷ ಜೈಲುವಾಸ ಅಥವಾ ೨ ಸಾವಿರ ರೂಪಾಯಿ ದಂಡ. ಯಾರಾದರೂ ತಂದೆ ತಾಯಿಗಳು ಪ್ರಚೋದನೆ ಮಾಡಿದರೆ ೫ ಸಾವಿರ ರೂಪಾಯಿ ದಂಡ. ಅಥವಾ ೧೦ ವರ್ಷ ಕಾರಾಗೃಹ ಶಿಕ್ಷೆ ಎಂದು ಮಾಡಿದ್ದೇವೆ. ಇದುವರೆಗೆ ಸುಮಾರು ೧೦–೧೨ ಪ್ರಕರಣಗಳಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ದೇವದಾಸಿಯರನ್ನು ಮದುವೆಯಾದವರಿಗೆ ೩ ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ, ಹಾಗಿದ್ದರೆ ಇದುವರೆಗೆ ಎಷ್ಟು ಜನ ಮುಂದೆ ಬಂದು ಈ ದೇವದಾಸಿಯರನ್ನು ಮದುವೆ ಮಾಡಿಕೊಂಡಿದ್ದಾರೆ ? ನೀವು ಕೊಡತಕ್ಕ ೩ ಸಾವಿರ ರೂಪಾಯಿ ಸಾಕಾಗುತ್ತದೆಯೆ ?

ಇನ್ನು ಎರಡನೆಯದಾಗಿ, ಇವರಿಗೆ ಜಾತಿ ಇಲ್ಲ ಎನ್ನುವ ಕಾರಣದಿಂದಾಗಿ ಕೂಡ ಯಾರೂ ಮದುವೆಯನ್ನು ಮಾಡಿಕೊಳ್ಳಲು ಮುಂದೆ ಬರುವುದಿಲ್ಲ. ಈ ದೇವದಾಸಿಯರು ಬೊಂಬಾಯಿ ಮಾರುಕಟ್ಟೆಗೆ ಹೋಗುತ್ತಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದಂತೆ

ತಡೆಗಟ್ಟಿ ಅವರ ಹೆಣ್ಣು ಮಕ್ಕಳಿಗೆ ಅನುದಾನವನ್ನು ಕೊಟ್ಟು ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವೇ ಹೇಗೆ?

ಶ್ರೀ ಜಿ. ಬಸವಣ್ಣೆಪ್ಪ —ಇದುವರೆಗೆ ನಾವು ೨೮೦ ಜನ ದೇವದಾಸಿಯರಿಗೆ ಮದುವೆ ಮಾಡಿದ್ದೇವೆ. ೧೯೮೭–೮೮ರಲ್ಲಿ ೧೦೮ ಜನರಿಗೆ ಮದುವೆ ಮಾಡಿದ್ದೇವೆ. ಈ ಉದ್ದೇಶಕ್ಕಾಗಿ ಮುಂದಿನ ಸಾಲಿಗೆ ೩.೨೫ ಲಕ್ಷ ರೂಪಾಯಿಯ ಬಜೆಟ್ ಪ್ರಾವಿಷನ್‌ನ್ನು ಮಾಡಿದ್ದೇವೆ. ದೇವದಾಸಿಯರು ನಮ್ಮ ರಾಜ್ಯವನ್ನು ಬಿಟ್ಟು ಬೊಂಬಾಯಿ ಮುಂತಾದ ಕಡೆಗೆ ಹೋಗದಂತೆ ತಡೆಗಟ್ಟಲು ಬೆಳಗಾಂ ಜಿಲ್ಲೆಯ ಬೀದರ್‌ನಲ್ಲಿ ಒಂದೊಂದು ವಿಶೇಷ ಘಟಕವನ್ನು ತೆರೆದಿದ್ದೇವೆ.

ಶ್ರೀ ರಮೇಶ್‌ಕುಮಾರ್.—ಈ ದೇವದಾಸಿ ವೃತ್ತಿಯಿಂದ ಜೀವನ ಮಾಡುತ್ತಿರುವವರ ಆರೋಗ್ಯವನ್ನು ಶಾಪಾಡುವ ದೃಷ್ಟಿಯಿಂದ ಮತ್ತು ಕೆಲವು ವಿಜಿಟರಿಂದ ಇವರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಿ ಇವರ ದುಡಿಮೆ ಇವರಿಗೇ ಪೂರ್ತಿಯಾಗಿ ಸಿಕ್ಕುವಂತೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡುತ್ತದೆಯೆ? ಬಡತನ ರೇಖೆಯಿಂದ ಇವರನ್ನು ಮೇಲಕ್ಕೆತ್ತುತ್ತೀರಾ?

ಶ್ರೀ ಜಿ. ಬಸವಣ್ಣೆಪ್ಪ.—ಇವರ ಈ ಹೀನ ವೃತ್ತಿಗೆ ಇವರಲ್ಲಿರತಕ್ಕ ಬಡತನ ಮತ್ತು ಸಮಾಜದಲ್ಲಿ ಇವರ ಬಗ್ಗೆ ಇರತಕ್ಕ ಕೆಟ್ಟ ಭಾವನೆ ಇದಕ್ಕೆ ಕಾರಣ. ತಮ್ಮ ಸಲಹೆ ಸೂಕ್ತವಾದುದು. ಅವರ ಪ್ರಕಾರ ಇವರನ್ನು ಬಡತನ ರೇಖೆಯಿಂದ ಮೇಲಕ್ಕೆತ್ತುವುದಕ್ಕೆ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ಶ್ರೀ ಬಾಬುರೆಡ್ಡಿ ವಿ. ತುರಗಳ್ —ಮಾನ್ಯ ಸಭಾಧ್ಯಕ್ಷರೆ. ಈ ದೇವದಾಸಿಯರನ್ನಾಗಿ ಮಾಡಿ ಬಿಡುವವರಿಗೆ ಅಥವಾ ಪ್ರಚೋದನೆ ಮಾಡುವವರಿಗೆ ಇಂತಿಷ್ಟು ದಿವಸ ಕಾರಾಗೃಹವಾಸ ಮತ್ತು ಇಂತಿಷ್ಟು ದಂಡ ವಿಧಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿದರು ಇವರು ಹೇಳತಕ್ಕ ಅಂಕಿಸಂಖ್ಯೆ ಪ್ರಕಾರ ಇದು ಒಂದು ದಾಖಲೆ ಆಷ್ಟೆ. ಇವರು ಸಮ್ಮಲ್ಲಿ ನಡೆಯುವ ಹುಣ್ಣಿಮೆ ಜಾತ್ರೆಗೆ ಬಂದು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಬಹಿರಂಗವಾಗಿ ಪೂಜೆ ಮಾಡಿ, ಬೆರವಣಿಗೆ ಮಾಡಿ ದೇವದಾಸಿಯರು ಎಂದು ಬಿಡುತ್ತಾರೆ, ಜೆಂದ್ರಗುತ್ತಿ ಜಾತ್ರೆಗೆ ಬಂದರೆ ಅಲ್ಲಿ ೧೦–೧೦ ಸಾವಿರ ಜನರನ್ನು ದೇವದಾಸಿಯರನ್ನಾಗಿ ಬಿಡುತ್ತಾರೆ. ಅಲ್ಲಿ ಬಂದು ಇವರು ಹಿಡಿಯುವುದಾದರೆ ಈ ದೇವದಾಸಿಯರು ಎಲ್ಲಿಂದ ಬರುತ್ತಾರೆಂದು ಗೊತ್ತಾಗುತ್ತದೆ. ಯಲ್ಲಮ್ಮ ಗುಡ್ಡದಲ್ಲೂ ಕೂಡ ಇದೇ ರೀತಿ ಪೂಜೆ ಮಾಡಿ, ಬೆರವಣಿಗೆ ಮಾಡಿ ಬಿಡುತ್ತಾರೆ. ಆದ್ದರಿಂದ ಇದನ್ನು ಮೂಲದಲ್ಲೇ ಚಿವುಟಿ ಹಾಕುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತದೆಯೇ?

ಶ್ರೀ ಜಿ. ಬಸವಣ್ಣೆಪ್ಪ.—ಈ ದೇವದಾಸಿ ಪದ್ಧತಿಯನ್ನು ಯಾವ ರೀತಿ ಅವಾಯ್ಡ್ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಈ ದೇವದಾಸಿ ಪದ್ಧತಿಯನ್ನು ಬಹಳ ಲಘುವಾಗಿ ತೆಗೆದುಕೊಂಡು, ಕೇವಲ ಕಾಯಿದೆ ಕಾನೂನಿನಿಂದ ತಡೆಗಟ್ಟುತ್ತೇವೆ, ಮದುವೆ ಮಾಡಿ ಕೊಡುವುದರ ಮೂಲಕ ಇದನ್ನು ನಿರ್ಮೂಲ ಮಾಡುತ್ತೇವೆಂದರೆ ಇದು ಪರಿಣಾಮಕಾರಿಯಾಗಿ ಜಾರಿ ಆಗುವುದಿಲ್ಲ. ಮೂಲಭೂತವಾಗಿ ಈ ದೇವದಾಸಿ ಪದ್ಧತಿಯನ್ನು ನಿರ್ಮೂಲ ಮಾಡಲು ದೇವದಾಸಿಯರ ಹೆಣ್ಣು ಮಕ್ಕಳನ್ನು ಮದುವೆಯಾಗುವವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಅಥವಾ ಇವರ ಪುನರ್ವಸತಿಯ ಬಗ್ಗೆ ಹೇಳುವುದಾದರೆ ಚಿಕ್ಕ ವಯಸ್ಸಿನಲ್ಲಿಯೇ ಈ ದೇವದಾಸಿಯರ ಮಕ್ಕಳನ್ನು ಸಾಮಾನ್ಯ ಜನರ ಜೊತೆ ಬೆರೆಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಬಡತನ ರೇಖೆಯಿಂದ ಇವರನ್ನು ಮೇಲಕ್ಕೆ ತರುವುದಕ್ಕೆ ಸರ್ಕಾರದವರು ಪರಿಣಾಮಕಾರಿಯಾಗಿ ಪ್ರಯತ್ನವನ್ನು ಮಾಡುವುದು ಸೂಕ್ತ. ಇವರಿಗೆ ಮದುವೆ ಮಾಡುತ್ತೇವೆಂದು ಹೇಳಬಹುದು, ಆದರೆ ನನ್ನ ಮತದಾರರ ಕ್ಷೇತ್ರವಲ್ಲಿ ಈ ದೇವದಾಸಿಯರು ಸರ್ಕಾರ ಹಣವನ್ನು ಕೊಡುತ್ತದೆನ್ನುವ ಆಸೆಯಿಂದ ಮುಂದೆ ಬಂದು ಮತ್ತೆ ದೇವದಾಸಿಯರ ವೃತ್ತಿಗೆ ಹೋಗುತ್ತಾರೆ. ಆದ್ದರಿಂದ ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ ಇವರಿಗೆ ತಗಲತಕ್ಕಂಥ ಕ್ಯಾನ್ಸರ್ ರೋಗವನ್ನು ತಡೆಗಟ್ಟುವುದಕ್ಕೆ ಏನಾದರೂ ಸರ್ಕಾರದವರು ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳುತ್ತೇನೆ?

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೇ, ಇದು ಒಂದು ದೊಡ್ಡ ಸಮಸ್ಯೆ. ಇದನ್ನು ತಿಳಿಸುವ ಸಲುವಾಗಿ ನಮ್ಮ ಇಲಾಖೆಯವರು ಒಂದು ಸಾಕ್ಷಚಿತ್ರವನ್ನು ಮಾಡಿದ್ದಾರೆ. ಈ ದೇವದಾಸಿ ಪದ್ಧತಿಯಿಂದ ಏನೇನು ತೊಂದರೆಗಳಾಗುತ್ತವೆ, ಯಾವ ಯಾವ ಖಾಯಿಲೆಗಳು ಬರುತ್ತದೆ ಎಂಬುದರ ಬಗ್ಗೆ ಸಾಕ್ಷಚಿತ್ರವನ್ನು ತೆಗೆದಿದ್ದು ಅದನ್ನು ಆ ಭಾಗದಲ್ಲಿ ಪ್ರದರ್ಶನ ಕೂಡ ಮಾಡಿದ್ದೇವೆ. ನಾನೂ ಕೂಡ ನೋಡಿದ್ದೇನೆ. ಅದನ್ನು ದೆಹಲಿಯ ಒಂದು ಚಿತ್ರ ತಾಯಾರಕರು ನಿರ್ಮಿಸಿದ್ದಾರೆ. ಆ ಚಿತ್ರವನ್ನು ಪ್ರದರ್ಶಿಸಲು ಕೊಡುತ್ತೇವೆ. ಇದರಿಂದ ಸಮಾಜದಲ್ಲಿ ಒಳ್ಳೆಯ ಪರಿಣಾಮವಾಗುತ್ತದೆ. ಸರ್ಕಾರ ಇದರ ನಿರ್ಮೂಲನಕ್ಕೆ ಬೇಕಾದ ಎಲ್ಲ ರೀತಿಯ ಸಹಕಾರವನ್ನು ಕೊಡುತ್ತದೆಂದು ಹೇಳುತ್ತೇನೆ.

ಶ್ರೀ ಐ.ಬಿ. ಶಂಕರ್.—ಮಾನ್ಯ ಮಂತ್ರಿಗಳು ದೇವದಾಸಿ ಮಕ್ಕಳ ಸಲುವಾಗಿ ಎರಡು ಕಡೆ ಪುನರ್‌ವಸತಿ ಸೌಲಭ್ಯವನ್ನು ಕಲ್ಪಿಸಿದ್ದೇವೆಂದು ಹೇಳಿದರು. ಅವರಿಗಾಗಿಯೇ ಪ್ರತ್ಯೇಕವಾದ ಹಾಸ್ಟೆಲ್‌ಗಳನ್ನು ತೆರೆದರೆ ಸಮಾಜದಲ್ಲಿ ಇವರನ್ನು ದೇವದಾಸಿ ಮಕ್ಕಳೆಂದು ದೂರಿಕರಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅವರಿಗೆ ಜನರಲ್ ಹಾಸ್ಟೆಲ್‌ಗಳಲ್ಲಿ ಅವಕಾಶವನ್ನು ಮಾಡಿಕೊಟ್ಟರೆ ಸಾರ್ವಜನಿಕರಲ್ಲಿ ಬೆರೆಯುವುದಕ್ಕೆ ಮತ್ತು ವಿದ್ಯಾವಂತರನ್ನಾಗಿ ಮಾಡಿ ಮುಂದುವರಿಸುವುದಕ್ಕೆ ಅನುವು ಮಾಡಿ ಕೊಟ್ಟಂತಾಗುತ್ತದೆ. ಇವರನ್ನು ಪ್ರತ್ಯೇಕವಾಗಿ ಇಟ್ಟರೆ ಸಮಾಜದಲ್ಲಿ ಇವರು ದೇವದಾಸಿಯರ ಮಕ್ಕಳು ಎಂದು ಎತ್ತಿ ತೋರಿಸಿದಂತಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ತಮ್ಮ ಸಲಹೆ ಒಳ್ಳೆಯ ಸಲಹೆ ಎಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು.—ಶ್ರೀ ಐ ಬಿ. ಶಂಕರ್‌ರವರ ಚುಕ್ಕೆ ಪ್ರಶ್ನೆ (೧೮೭ (೬೬೩), ಇದನ್ನು ಮುಂದೆ ಹಾಕಲಾಗಿದೆ.

ಶ್ರೀ ಎಸ್.ಎಂ. ಅಡ್ಯಂತಾಯರವರ ಚುಕ್ಕೆ ಪ್ರಶ್ನೆ (೧೮೮) (೭೦೮) ಸದಸ್ಯರು ಗೈರು ಹಾಜರಿ.

ಶ್ರೀ ಹೆಚ್. ಸಿ. ಮಹಾದೇವಪ್ಪನವರ ಚುಕ್ಕೆ ಪ್ರಶ್ನೆ ೧೮೯ (೭೨೪) ಇದನ್ನು ಮುಂದೆ ಹಾಕಲಾಗಿದೆ.

ಸಾಲಗಳನ್ನು ಮನ್ನಾ ಮಾಡದೆ ಇರುವುದು.

೭೯೨. ಶ್ರೀ ಎ. ಕೃಷ್ಣಪ್ಪ ಎಂ.ಎಲ್.ಎ.—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಸಾಲದಿಂದ ತೆಗೆಸಿದ ಬಾವಿ ವಿಫಲವಾದರೆ ಆ ಸಾಲವನ್ನು ಮನ್ನಾ ಮಾಡಲಾಗುತ್ತದೆಯೆ;

ಆ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಸಾಲವನ್ನು ಮನ್ನಾ ಮಾಡಲಾಗುವುದು.

ಇ) ಮಾಗಡಿ ತಾಲ್ಲೂಕಿನ ತಾವರೇಕೆರೆ ಹೋಬಳಿ ವರ್ತೂರು ಗ್ರಾಮದ ಸರ್ವೆ ನಂಬರ್ ೪೨ರಲ್ಲಿ ತೆಗೆಸಲಾದ ಬಾವಿಗೆ ಮಾಗಡಿ ಶಾಖೆಯ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲವನ್ನೇನಾದರೂ ಮಂಜೂರು ಮಾಡಲಾಗಿದೆಯೆ;

ಈ) ಹಾಗಿದ್ದಲ್ಲಿ ಯಾವಾಗ, ಯಾರಿಗೆ ಹಾಗೂ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ.

ಉ) ಈ ಬಾವಿ ವಿಫಲವಾಗಿರುವುದು ನಿಜವೆ; ಹಾಗಿದ್ದಲ್ಲಿ ಸಾಲ ಮನ್ನಾ ಕೋರಿ ಅರ್ಜಿಗಳು ಏನಾದರೂ ಬಂದಿದೆಯೆ;

ಊ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು;

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಬಾವಿ ವಿಫಲಗೊಂಡಲ್ಲಿ, ರೈತರಿಗೆ ಜಾರಿಯಲ್ಲಿರುವ ಸರ್ಕಾರದ ಆದೇಶದ ಪ್ರಕಾರ, ಪರಿಹಾರವನ್ನು ಮಂಜೂರು ಮಾಡಲಾಗುತ್ತದೆ.